ಓ. ಎಸ್. ನಂಃ 179/2016

ಡಿ . ಡಬ್ಲ್ಯೂಃ 1

ದಿಃ24-05-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎನ್ ಎನ್ ಪಿ ವಾದಿ ಪರ ವಕೀಲರಿಂದ ಃ

ಗದಿಗೆಪ್ಪ ನನಗೆ ಗಂಡ ಆಗಬೇಕು. ಗದಿಗೆಪ್ಪ ಅವರ ತಂದೆ ಹೆಸರು ಗುರುಶಾಂತಪ್ಪ ಇರುತ್ತದೆ . ಅವರ ತಾಯಿ ಹೆಸರು ಕೊಂತೆಮ್ಮ ಇರುತ್ತದೆ . ಗುರುಶಾಂತಪ್ಪ ಮತ್ತು ಕೊಂತೆಮ್ಮ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರಿಗೆ ಗದಿಗೆಪ್ಪ ಮತ್ತು ಪ್ರಕಾಶ ಎಂಬುವವರು 2 ಜನ ಮಕ್ಕಳು ಮತ್ತು ಬಸವಂತೆವ್ವ ಎಂದು ಮಗಳು ಇರುತ್ತಾರೆ. ಬಸವಂತೆವ್ವ ಅವರಿಗೆ ಗಂಡನ ಮನೆಯಲ್ಲಿ ನಿಂಗವ್ವ ಎಂದು ಕರೆಯುತ್ತಾರೆ. ಪ್ರಕಾಶ ತೀರಿಕೊಂಡಿರುತ್ತಾರೆ. ಅವರಿಗೆ ನಿರ್ಮಲ ಎಂದು ಹೆಂಡತಿ ಮತ್ತು ಅಬಿಶೇಕ ಮತ್ತು ಆಕಾಶ ಎಂದು ಎರಡು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ.

2. ನಮಗೆ ಸರ್ವೆ ನಂಬರ 84 ರಲ್ಲಿ 10 ಎಕರೆ 39 ಗುಂಟೆಯಲ್ಲಿ ದಕ್ಷಿಣ ಬಾಗದ 8 ಎಕರೆ ಜಮೀನು ಇರುತ್ತದೆ ಎಂದರೆ ಸರಿ . ಅದರ ಚಕುಬಂದಿ ಪೂರ್ವಕ್ಕೆ ರಿ .ಸ ನಂಬರ 85 ಇರುತ್ತದೆ ಎಂದರೆ ಸರಿ , ಅದರ ನಂತರ ವೆಂಕಣ್ಣ ಲಮಾಣಿ ಅವರ ಆಸ್ತಿ ಎಂದರೆ ಸರಿ, ಪಶ್ಚಿಮಕ್ಕೆ ಸರಕಾರಿ ಹೊಂಡ ಇದೆ ಎಂದರೆ ಸರಿ, ಉತ್ತರಕ್ಕೆ 2 ಎಕರೆ 39 ಗುಂಟೆ ಸೋಮಣ್ಣ ಜಟ್ಟೆಪ್ಪನವರ ಅವರಿಗೆ ಸೇರಿದ ಆಸ್ತಿ ಇರುತ್ತದೆ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಸಂಗನಗೌಡ ಪಾಟೀಲ ಅವರ ಜಮೀನು ಇದೆ ಎಂದರೆ ಸರಿ. ರಿ ಸ ನಂಬರ 85 6 ಎಕರೆ 36 ಗುಂಟೆ ಜಮೀನಿನ ಪೈಕಿ ದಕ್ಷಿಣ ಬಾಗದ 2 ಎಕರೆ ಜಮೀನು ನಮ್ಮ ಮನೆತನಕ್ಕೆ ಇರುತ್ತದೆ ಎಂದರೆ ಸರಿ. ಅದರ ಚಕುಬಂದಿ ಪೂರ್ವಕ್ಕೆ ಉಮೇಶಗೌಡ ಪಾಟೀಲ ಅವರ ಆಸ್ತಿ ಇದೆ ಎಂದರೆ ಸರಿ, ಪಶ್ಚಿಮಕ್ಕೆ ರಿ ಸ ನಂಬರ 84 ಇರುತ್ತದೆ ಎಂದರೆ ಸರಿ, ಉತ್ತರಕ್ಕೆ ಸಂಗನಗೌಡ ಪಾಟೀಲ ಅವರ ಆಸ್ತಿ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಪಕ್ಕಿರಪ್ಪ ಹರಿಜನ ಅವರ ಆಸ್ತಿ ಇರುತ್ತದೆ ಎಂದರೆ ಸರಿ. ಚಂದಾಪುರ ಗ್ರಾಮ ಪಂಚಾಯಿತಿ ಆಸ್ತಿ ನಂಬರ 29 , 30/1 ಮತ್ತು 30/2 ಕೆಂಪು ಹಂಚಿನ ಮನೆ ಇರುತ್ತದೆ ಎಂದರೆ ಸರಿ. ಇದರ ಚಕುಬಂದಿ ಪೂರ್ವಕ್ಕೆ ರಸ್ತೆ ಎಂದರೆ ಸರಿ, ಪಶ್ಚಿಮಕ್ಕೆ ಮೂಕಪ್ಪ ಕೂಡಲ ಅವರ ಆಸ್ತಿ ಎಂದರೆ ಸರಿ, ಉತ್ತರಕ್ಕೆ ರಾಮಣ್ಣ

ದೊಡ್ಡಮನಿ ಅವರ ಆಸ್ತಿ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಸಂಗಪ್ಪ ಕೂಡಲ ಅವರ ಆಸ್ತಿ ಎಂದರೆ ಸರಿ. ಚಂದಾಪುರ ಗ್ರಾಮ ಪಂಚಾಯಿತಿ ಆಸ್ತಿ ನಂಬರ 216 ಕೆಂಪು ಹಂಚಿನ ಮನೆ ಮತ್ತು ಖುಲ್ಲಾ ಜಾಗ ಇದೆ ಎಂದರೆ ಸರಿ ಇದರ ಚಕುಬಂದಿ ಪೂರ್ವಕ್ಕೆ ಪುಟ್ಟಪ್ಪ ಬೆಣ್ಣಿ ಅವರ ಆಸ್ತಿ ಎಂದರೆ ಸರಿ , ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ರಸ್ತೆ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಗದಿಗೆಪ್ಪ ಬೆಣ್ಣಿ ಅವರ ಆಸ್ತಿ ಇರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ಬಸವಂತೆವ್ವ ದಿ18-10-2016 ಕ್ಕೆ ನನ್ನ ಗಂಡನಾದ ಗದಿಗೆಪ್ಪ ಮೇಲೆ 1/3 ಹಿಸ್ಸೆ ಕೇಳಿ ದಾವೆಯನ್ನು ಹಾಕಿದ್ದರು ಎಂದರೆ ಸರಿ. ಅದು ಪೂರ್ಣ ಚೌಕಾಸಿ ಆಗಿ ದಿ 18-04-2017 ರಂದು ಡಿಕ್ರಿ ಆಗಿರುತ್ತದೆ ಎಂದರೆ ಸರಿ .

3. ನನ್ನ ಗಂಡನಾದ ಗದಿಗೆಪ್ಪ ಅವರು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅವರ ವಿರುದ್ಧ ಆರ್ ಎ ನಂಬರ 120/2017 ಹಾಕಿದ್ದರು ಎಂದರೆ ಸರಿ. ಬಸವಂತೆವ್ವ ಅವರು ಒ ಎಸ್ ನಂಬರ 179/2016 ರ ಮೇಲೆ ಇದೇ ನ್ಯಾಯಾಲಯದಲ್ಲಿ ದಿ 07-07-2017 ರಂದು ಎಫ್ ಡಿ ಪಿ ನಂಬರ 12/2015 ದಾಖಲು ಮಾಡಿದರು ಎಂದರೆ ಸರಿ. ಅದರಲ್ಲಿ ತಾಲುಕ ಸರ್ವೆಯರ್ ಅವರು ಜಮೀನಿಗೆ ಹೋಗಿ ಅಳತೆ ಮಾಡಿ ವರದಿ ಕೊಟ್ಟಿದ್ದರು ಎಂದರೆ ಸರಿ. ಇದೆಲ್ಲಾ ನನಗೆ ಮತ್ತು ನನ್ನ ಗಂಡನಿಗೆ ಗೊತ್ತಿತ್ತು ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಮೊದಲಿನ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ಗಂಡ ತೀರಿಕೊಂಡ ನಂತರ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಗಂಡ ತೀರಿಕೊಂಡು ಒಂದುವರೆ ವರ್ಷ ಆಗಿರುತ್ತದೆ. ಒಂದುವರೆ ವರ್ಷದಿಂದ ನ್ಯಾಯಾಲಯಕ್ಕೆ ನಾನು ಸರಿಯಾಗಿ ಬರುತ್ತಾ ಇದ್ದೇನೆ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಎನು ಬರೆದಿರುತ್ತದೆ ಎಂದು ನನಗೆ ಗೊತ್ತಿರುತ್ತದೆ ಅದನ್ನು ನಾನೇ ಹೇಳಿ ಬರೆಸಿರುತ್ತೇನೆ.

4. ಚಂದಾಪುರ ಗ್ರಾಮದ ಯಾವುದಾದರು ನೊಂದಣಿ ಆದ ಆಸ್ತಿಗಳ ಖರೀದಿ ಪತ್ರವನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವಿರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಆಸ್ತಿಯ ಕಾಗದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದೀರಿ ಎಂದರೆ ಸಾಕ್ಷಿಯು ಬರೆದಿದೆ ನಾನು ತಂದು

ಕೊಡುತ್ತೇನೆ ಎಂದು ನುಡಿಯುತ್ತಾರೆ. ನಾನು ಮುಂದಿನ ತಾರಿಕಗೆ ತಂದು ಕೊಡುತ್ತೇನೆ.
(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.